

ದಿರಿಸಿಗೆ ಹೊಂದುವ ಅಲಂಕಾರ, ಆಭರಣಗಳ ಆಯ್ಕೆಗಳಾಗಬೇಕು. ಅದು ಸೀರೆಯೇ ಆಗಬೇಕೆಂದಿಲ್ಲ. ರೇಶಿಮೆಯೇ ಇರಬೇಕೆನ್ನುವ ಕರಾರೂ ಇಲ್ಲ. ಕಾಂಜೀವರಂ ಬಿಟ್ಟು ಖಾದಿಗೂ ಶಿಫ್ಟ್ ಆಗಬಹುದು, ಸೀರೆ ಬೇಡವೆಂದರೆ ಸ್ಯಾಟಿನ್ ಲೆಹೆಂಗಾ, ಶಿಫಾನ್ ಗೌನ್, ಕಾಟನ್ ಕುರ್ತಿ, ಚಂದೇರಿ ಚೂಡಿದಾರೂ ಆಗಬಹುದು. ಅಷ್ಟೇ ಏಕೆ, ಡ್ರೇಪ್ಡ್ ಸ್ಕರ್ಟ್‌ಗಳೂ (ನಿರಿಗೆ ಇರುವ ಸ್ಕರ್ಟ್) ಸಹ ಈ ಹಬ್ಬಕ್ಕೆ ಜೊತೆಯಾಗಬಹುದು. ಬಣ್ಣಗಳ ಆಯ್ಕೆ ಈ ಹಬ್ಬದ ವಿಶೇಷ.

## ಯಾವ ದಿನ, ಯಾವ ಬಣ್ಣ?

**ಅ.7-ಗುರು-ಕೇಸರಿ**

ಕೇಸರಿ, ಅದೇ ನಾರಂಗಿ... ಕೇಸರಿಯಲ್ಲಿ ಬರೊಬ್ಬರಿ 128 ಶೇಡ್‌ಗಳಿವೆ! ಅಂತಃಶಕ್ತಿ ಮತ್ತು ಆತ್ಮಾನಂದವನ್ನು ಪ್ರತಿನಿಧಿಸುವ ಬಣ್ಣವಿದು. ಹಳದಿ ಮತ್ತು ಕೆಂಪು ಹದವಾಗಿ ಬೆರೆತು ಜನ್ಮತಳೆಯುವ ಕೇಸರಿ ಕ್ರಾಂತಿಯ ಸಂಕೇತ. ಹಳದಿ–ಕೆಂಪು ಸಮನಾದರೆ ಒಂದು ಬಗೆ, ಹಳದಿ ಹೆಚ್ಚಾಗಿ ಕೆಂಪು ಕಡಿಮೆಯಾದರೆ ಮತ್ತೊಂದು, ಕೆಂಪು ಢಾಳಾಗಿ ಹಳದಿ ಕಡಿಮೆಯಾದರೆ ಇನ್ನೊಂದು ಬಗೆ... ಹೊಮ್ಮಿಸಿದಷ್ಟು ಛಾಯೆಗಳಲ್ಲಿ ಪ್ರಕಟಗೊಳ್ಳುವ ಬಣ್ಣ. ಮುಳುಗುವ ಸೂರ್ಯನ ಕೇಸರಿ, ಉರಿಯ ಕೆನ್ನಾಲಿಗೆಯ ಕೇಸರಿ, ಕಿತ್ತಳೆ ಹಣ್ಣಿನ ತಂಪಾದ ಕೇಸರಿ... ಇದರಲ್ಲಿ ಯಾವ ಛಾಯೆಯನ್ನಾದರೂ ಆರಿಸಿಕೊಳ್ಳಬಹುದು. ಜೊತೆಗೆ ಬ್ಲ್ಯಾಕ್ ಮೆಟಲ್ ಆಭರಣ ಹೊಂದಿಸಿ.

**ಅ.8-ಶುಕ್ರ-ಬಿಳಿ**

ಇದು ಪರಿಶುದ್ಧತೆ, ಶಾಂತಿ ಮತ್ತು ಧ್ಯಾನಸ್ಥ ಮನಸ್ಸಿನ ಸಂಕೇತ. ಇದರಲ್ಲೂ 150 ಛಾಯೆಗಳಿವೆ. ಹಕ್ಕಿ ಪುಕ್ಕದ ಬಿಳಿ, ಹಾಲಿನ ಬಿಳಿ, ಮೋಡದ ಬಿಳಿ, ನಸುಕಿನಲ್ಲಿ, ಬೆಟ್ಟದಲ್ಲೇಳುವ ಮಂಜಿನ ಬಿಳಿ, ಹಿಮದ ಸ್ಪಟಿಕ ಬಿಳಿ, ಮಲ್ಲಿಗೆಯ ಅಚ್ಚ ಬಿಳಿ... ಆಹಾ, ಯಾವ ಬೆರಕೆಗಳಿಲ್ಲದೆ ನಿಸರ್ಗವೆ ನೀಡಿದ ಅದೆಷ್ಟು ಬಿಳಿ ಛಾಯೆಗಳು! ಪೂರ್ತಿ ಬಿಳಿಬಣ್ಣದ ಅನಾರ್ಕಲಿ, ಕುರ್ತಿಗಳ ಜೊತೆಗೆ ಎದ್ದು ಕಾಣುವ ಕುಂದನ್, ಅಂಕುರ್ ಆಭರಣಗಳನ್ನು ಹೊಂದಿಸಬಹುದು.

**ಅ.9-ಶನಿ-ಕೆಂಪು**

ಕೆಂಪು ಎಂದರೆ ಬರೀ ಕ್ರೌರ್ಯವಲ್ಲ. ಕೆಂಪು ಸೃಷ್ಟಿಯ ಬಣ್ಣ, ಕೆಂಪು ಉತ್ಕಟ ಪ್ರೀತಿಯ, ಕಡುಮೋಹದ ಪ್ರತೀಕ. ಈ ಕೆಂಪಿನಲ್ಲೂ ಕಣ್ಣು ಕೋರೈಸುವಷ್ಟು ಛಾಯೆಗಳುಂಟು. ರಕ್ತಗೆಂಪು, ಗುಲಾಬಿಯ ಕೆಂಪು, ಹುಂಜದ ನೆತ್ತಿಯ ಮೇಲಿರುವ ಪುಕ್ಕದ ಕೆಂಪು, ಸೂರ್ಯಾಸ್ತದ ಕೆಂಪು, ಕೆಂಡದ ಕೆಂಪು, ದ್ರಾಕ್ಷಿ ರಸದ ಕಡುಗಪ್ಪು ಕೆಂಪು, (ವೈನ್ ರೆಡ್), ಸ್ಪಟಿಕದ ಕೆಂಪು... ರೇಶಿಮೆ, ಸ್ಯಾಟಿನ್, ಲಿನೆನ್, ನೆಟೆಡ್, ಎಂಬ್ರಾಯ್ಡರಿ, ಬಾಂದನಿ ಎಲ್ಲದರಲ್ಲೂ ಕೆಂಪು ಚಂದ. ಈ ಬಣ್ಣಕ್ಕೆ ಫ್ಯಾನ್ಸಿ ಹಾಗೂ ಪ್ಲೇನ್ ಗೋಲ್ಡ್ ಆಭರಣ ಸೂಕ್ತ. ಬೆಳ್ಳಿ ಕೂಡ ಹೊಂದುತ್ತದೆ.

**ಅ.10-ಭಾನು-ನೀಲಿ**

ನೀಲಿ ಬಣ್ಣವು ಆರೋಗ್ಯ ಮತ್ತು ಸಮೃದ್ಧಿಯನ್ನು ಸೂಚಿಸುತ್ತದೆ. ವರ್ಣದ್ರವ್ಯ ನೀಲಿ, ಉಕ್ರೇನಿನ ಧ್ವಜದಲ್ಲಿರುವ ಕಡುನೀಲಿ, ಬೆರ್ರಿಹಣ್ಣಿನ ನೀಲಿ, ನೇರಳೆ ಹಣ್ಣಿನ ನೀಲಿ, ಆಕಾಶದ ತಿಳಿ ನೀಲಿ, ಸಾಗರದಲೆಯ ನಸುನೀಲಿ, ಕಿಂಗ್ ಫಿಶರ್ ಪಕ್ಷಿಯ ಕಡುನೀಲಿ, ಕೃಷ್ಣ, ಈಶ್ವರನ ಶ್ಯಾಮಲವರ್ಣ. ಯಾವ ಛಾಯೆಯ ದಿರಿಸು ಎನ್ನುವುದರ ಮೇಲೆ ಯಾವ ಆಭರಣ ಎನ್ನುವುದನ್ನು ನಿರ್ಧರಿಸಬೇಕು.

**ಅ.11-ಸೋಮ-ಹಳದಿ**

ಹಳದಿ ಪ್ರಕಾಶಮಾನವಾದ ಬಣ್ಣ. ಎಲ್ಲರ ಕಣ್ಣ ಸೆಳೆಯುವ ಒಲವಿನ ಬಣ್ಣ. ನಿಸರ್ಗ ತನ್ನ ಒಡಲಲ್ಲಿ ಅದೆಷ್ಟು ಬಗೆಯ ಹಳದಿ ಛಾಯೆಗಳನ್ನು ಹಿಡಿದಿಟ್ಟುಕೊಂಡಿದೆ ನೋಡಿ. ಇಳಿ ಸಂಜೆಯ ಸೂರ್ಯನ ಹಳದಿ, ಸೂರ್ಯಕಾಂತಿಯ ಅಚ್ಚ ಹಳದಿ, ಸೇವಂತಿಗೆಯ ನಸು ಹಳದಿ, ಚೆಂಡು (ಗೊಂಡೆ) ಹೂವಿನ ದಟ್ಟ ಹಳದಿ, ನಿಂಬೆಹಣ್ಣಿನ ಹಳದಿ, ಚಿನ್ನದ ಹಳದಿ... ಹಳದಿ ಬಣ್ಣದೊಂದಿಗೆ ಇಮಿಟೇಶನ್ ಆಭರಣಗಳು ಚಂದ.

**ಅ.12 ಮಂಗಳ, 15 ಶುಕ್ರ.-ಹಸಿರು**

ಹಸಿರು ನಿಸರ್ಗದ ಬಣ್ಣ. ಹಸಿರು ಚೆಲುಮೆಯ ಬಣ್ಣ. ಹಸಿರುಟ್ಟರೆ ಮನಸ್ಸು ನಿರಾಳ ಎನ್ನುತ್ತದೆ ಮನೋವಿಜ್ಞಾನ. ಅದು ಮನಸ್ಸನ್ನು ತಣ್ಣಗಿಡುತ್ತದೆ. ನವರಾತ್ರಿಯ 6 ಮತ್ತು 9ನೇ ದಿನವನ್ನು ಹಸಿರು ಬಣ್ಣಕ್ಕೆ ಇಡಲಾಗಿದೆ. ದಟ್ಟಕಾಡಿನ ಹಸಿರು, ಚಿಗುರೆಲೆಯ ಹಸಿರು, ನಿಂಬೆ ಹಸಿರು, ಬಾಳೆ ಹಸಿರು, ನವಿಲುಗರಿಯ ಹಸಿರು, ಗಿಣಿಹಸಿರು, ಮದರಂಗಿ ಹಸಿರು ಎಷ್ಟೊಂದು ವಿಧ! ಈ ಹಸಿರಿನಲ್ಲಿ ಎಲ್ಲಾ ದಿರಿಸೂ ಅಂದವೆ. ಕಾಟನ್ ಸಿಲ್ಕ್, ಲಿನೆನ್, ಚಂದೇರಿ, ಸ್ಯಾಟಿನ್, ಆರ್ಟ್ ವರ್ಕ್, ಕ್ರೇಪ್ ಯಾವುದೂ ಆಗಬಹುದು.

**ಅ.13-ಬುಧ-ಬೂದು**

ಬೂದು ಪರಿವರ್ತನೆಯ ಶಕ್ತಿಯನ್ನು ಸೂಚಿಸುತ್ತದೆ. ಇದನ್ನು ವರ್ಣರಹಿತ ಬಣ್ಣವೆಂದು ಕರೆಯಲಾಗುತ್ತದೆ. ಹಿಂದೆಲ್ಲಾ ಬೂದು ಬಣ್ಣವನ್ನು ಹತಾಶೆಯ ಬಣ್ಣ ಎಂದು ಕರೆಯಲಾಗುತ್ತಿತ್ತು. ಆದರೆ ಈಗ ಬೂದು ಬಣ್ಣ ಹೊಸ ಟ್ರೆಂಡ್ ಆಗಿದೆ. ಮಂಕು ಬಣ್ಣ ಎನ್ನುವ ಹಣೆಪಟ್ಟಿಯಿಂದ ಹೊರಬಂದು ನ್ಯೂಡ್ ಕಲರ್ ಎನ್ನುವ ನಾಮಾಂಕಿತದಿಂದ ಹೊಸ ಅಲೆ ಸೃಷ್ಟಿಸುತ್ತಿದೆ.

**ಅ.14-ಗುರು-ನೇರಳೆ**

ನೇರಳೆ ಬಣ್ಣದ ಬೆರಗೇ ಬೇರೆ. ನೀಲಿಯಿಂದ ಹುಟ್ಟಿ, ನೀಲಿಯಂತೆಯೇ ಕಂಡರೂ ನೇರಳೆಗೆ ಸ್ವತಂತ್ರ ಅಸ್ತಿತ್ವವಿದೆ. ತುಸುವೇ ಏರಿಳಿತವಾದರೂ ನೇರಳೆ ನೀಲಿಯಾದೀತು. ನೇರಳೆ ಬಣ್ಣದ ಬನಾರಸಿ ರೇಷ್ಮೆ ಸೀರೆ ಎಲ್ಲಾ ವಯೋಮಾನದ, ಎಲ್ಲಾ ಮಹಿಳೆಯರಿಗೂ ರಾಣಿಯ ಲುಕ್ ನೀಡಬಲ್ಲದು. ಬೂದು, ನೇರಳೆ, ನೀಲಿ ಬಣ್ಣದ ತೊಡುಗೆಗಳ ಜೊತೆಗೆ ಟೆಂಪಲ್ ಡಿಸೈನ್‌ನ ಆಭರಣಗಳನ್ನು ಜೋಡಿಸಿಕೊಳ್ಳಬಹುದು. ■

## ಎಲ್ಲರಿಗೂ ಹೊಂದುವ ನ್ಯೂಡ್ ಲಿಪ್‌ಸ್ಟಿಕ್



ನವರಂಗಿನ ಸಂಭ್ರಮ ಪರಿಪೂರ್ಣವಾಗಬೇಕೆಂದರೆ ಆಯಾ ದಿರಿಸಿಗೆ ಯಾವ ಲಿಪ್‌ಸ್ಟಿಕ್ ಎನ್ನುವುದನ್ನು ಸೇರಿಸಲೇಬೇಕು. ಇದರಲ್ಲಿ ಈಗೀಗ ಎಲ್ಲರನ್ನೂ ಸೆಳೆಯುತ್ತಿರುವ ಟ್ರೆಂಡ್ ಎಂದರೆ ನ್ಯೂಡ್ ಕಲರ್. ಕಾಲೇಜು ಯುವತಿಯರಿಂದ ಹಿಡಿದು, ಕೆಲಸಕ್ಕೆ ಹೋಗುವ ಮಧ್ಯವಯಸ್ಸಿನ ಮಹಿಳೆಯರು, ಗೃಹಿಣಿಯರೂ ಸೇರಿದಂತೆ ಎಲ್ಲರಿಗೂ ಹೊಂದುವ ಗುಣ ಇದಕ್ಕಿದೆ. ಅಲ್ಲದೆ, ಕೇಸರಿ ತೊಡುವ ದಿನ ನಿಮಗೆ ಬೋಲ್ಡ್ ಲುಕ್ ಬೇಕೆಂದರೆ ಕೇಸರಿ ಅಥವಾ ಕೆಂಪು ಲಿಪ್‌ಸ್ಟಿಕ್‌ನೊಂದಿಗೆ ತುಸು ಢಾಳಾದ ಮೇಕಪ್‌ಗೆ ಹೋಗಬಹುದು. ಬಿಳಿ ವಸ್ತ್ರವಾದರೆ ಅದರ ಅಂಚು–ಸೆರಗಿನ ಬಣ್ಣವನ್ನಾಧರಿಸಿ, ಗುಲಾಬಿ, ಕೆಂಪು, ಕಂದು ಇವುಗಳಲ್ಲಿ ಯಾವುದನ್ನಾದರೂ ಆರಿಸಿಕೊಳ್ಳಬಹುದು. ಕೆಂಪು ದಿರಿಸಿಗೆ ಕೆಂಪೇ ಸಾಟಿ. ಕೆಂಪಿನಲ್ಲಿ ನೂರಾರು ಛಾಯೆಗಳುಂಟು ನಿಮ್ಮ ಸೀರೆ ಯಾವ ಕೆಂಪು ಎನ್ನುವುದರ ಮೇಲೆ ಲಿಪ್‌ಸ್ಟಿಕ್‌ನ ಕೆಂಪು ನಿರ್ಧಾರವಾಗುತ್ತದೆ. ಇನ್ನು ನಾಲ್ಕನೇ ದಿನದ ನೀಲಿಗೆ ಗುಲಾಬಿ ಲಿಪ್‌ಸ್ಟಿಕ್ ಹೆಚ್ಚು ಸೂಕ್ತ. ಹಳದಿ ಶೇಡುಗಳಿಗೆ ಕಂದು ಅಥವಾ ಗುಲಾಬಿ ಇರಲಿ. ಹಸಿರುಟ್ಟ ದಿನ ಗುಲಾಬಿ ಅಥವಾ ಕೆಂಪು ಲಿಪ್‌ಸ್ಟಿಕ್ ಸೂಕ್ತ. ಬೂದು ಹಾಗೂ ನೇರಳೆ ಬಣ್ಣಕ್ಕೆ ನ್ಯೂಡ್ ಲಿಪ್‌ಸ್ಟಿಕ್ ಚಂದ.

**-ದೀಪಾ ಹೊಳಿಮಠ**, ಮೇಕಪ್ ಆರ್ಟಿಸ್ಟ್